

factsheet: Veggie4school school gardening programme

# Getting Ready to Grow

## ನಮ್ಮ ಪರಿಚಯ

ಶಾಲಾ ಪೌಷ್ಟಿಕ ತೋಟಗಳನ್ನು ಪ್ರಾರಂಭಿಸಲು ಶಿಕ್ಷಣ ಸಚಿವಾಲಯ ನೀಡಿದ ನಿರ್ದೇಶನಕ್ಕೆ ಪ್ರತಿಕ್ರಿಯೆಯಾಗಿ, ವೆಜ್ಜಿ4 ಸ್ಕೂಲ್ ಕಾರ್ಯಕ್ರಮವು ಕೇವಲ  ಒಂದು ತೋಟಗಾರಿಕೆ ಉಪಕ್ರಮಕ್ಕಿಂತ ಮಿಗಿಲಾದ ಕಾರ್ಯಕ್ರಮವಾಗಿದೆ. ಇದು ಬೆಳವಣಿಗೆಯನ್ನು  ಗ್ರಹಿಕೆ ಮತ್ತು ಸುಸ್ಥಿರ ಜೀವನದ ಜೊತೆ ಬೆರೆಸುವ ಸಂಗಮವಾಗಿದೆ. ನೆಡಲಾದ ಪ್ರತಿ ಸಸಿಯು, ಮಧ್ಯಾಹ್ನದ ಬಿಸಿಯೂಟ ಯೋಜನೆಯನ್ನು ಅನುಸರಿಸುತ್ತದೆ ಮತ್ತು ತಾಳ್ಮೆ, ಸಹಯೋಗ ಹಾಗು ಬದ್ಧತೆಯ ಪಾಠಗಳನ್ನು ನೀಡುತ್ತದೆ. ನಮ್ಮ "V4S ಗಾರ್ಡನಿಂಗ್ ಲೆಸನ್ಸ್" ಹಾಗು "V4S-ಟೇಸ್ಟಿಂಗ್ ಲೆಸನ್ಸ್" ಮೂಲಕ ವಿದ್ಯಾರ್ಥಿಗಳು ಕೃಷಿಯ ಸಂತೋಷವನ್ನು ರುಚಿಯ ಮೆಚ್ಚುಗೆಯ ಜೊತೆ ಬೆಸೆದು, ಪ್ರತಿ ತುತ್ತನ್ನು  ಪರಿಶ್ರಮದ ಆಚರಣೆಯನ್ನಾಗಿ ರೂಪಾಂತರಿಸುತ್ತಾರೆ.

ಮರುಬಳಕೆಯ ಕಾಗದದಿಂದ ತಯಾರಿಸಿದ ಕುಂಡಗಳಲ್ಲಿ (ಪಾಟ್ಸ್) ಬೇರೂರಿದ ಸುಸ್ಥಿರತೆಯು, ವೆಜ್ಜಿ4 ಸ್ಕೂಲ್ ಕಾರ್ಯಕ್ರಮದ ಹಸಿರು ಭವಿಷ್ಯದ ಚಿಂತನೆಗೆ  ಪುರಾವೆಯಾಗಿದೆ. ಸಸ್ಯಗಳಿಗಿಂತ ಮಿಗಿಲಾದ  - ಮೌಲ್ಯಗಳು, ಒಳನೋಟಗಳು ಮತ್ತು ಸಮರ್ಥನೀಯ ಮಹತ್ವಾಕಾಂಕ್ಷೆಗಳನ್ನು ಬೆಳೆಸುವ  ಈ ಪರಿವರ್ತಕ ಪ್ರಯತ್ನದಲ್ಲಿ ನಮ್ಮೊಂದಿಗೆ ಪಾಲ್ಗೊಳ್ಳಿ.

.

## ಕಲಿಕೆಯ ಮಾರ್ಗಗಳು:

**"ಪ್ರತಿ ಅಧ್ಯಾಯವು 40 ನಿಮಿಷಗಳ V4S ತೋಟಗಾರಿಕೆ ಮತ್ತು 20 ನಿಮಿಷಗಳ V4S ಪೌಷ್ಟಿಕತೆಯ ಪ್ರಾಯೋಗಿಕ ಕಲಿಕೆಯನ್ನು ಒಳಗೊಂಡಿರುತ್ತದೆ."**

1. V4S ಗಾರ್ಡನಿಂಗ್ ಲೆಸನ್ಸ್: ಪ್ರಾಯೋಗಿಕ ಅನುಭವವನ್ನು ನೀಡುತ್ತಿದೆ.
2. V4S ಟೇಸ್ಟಿಂಗ್ ಲೆಸನ್ಸ್:  ಆಹಾರದ ಪೌಷ್ಟಿಕಾಂಶದ ಮೌಲ್ಯ ಮತ್ತು ಪರಿಸರ ಪರಿಣಾಮಗಳ ಬಗ್ಗೆ ಬೋಧನೆ.

## ಮುಖ್ಯ ಗುರಿ:

ವೆಜ್ಜಿ 4 ಸ್ಕೂಲ್ ಕಾರ್ಯಕ್ರಮವು ಮಕ್ಕಳಿಗೆ ಪರಿಸರ ಸ್ನೇಹಿ ತೋಟಗಾರಿಕಾ ಅಭ್ಯಾಸಗಳನ್ನು ಕಲಿಸುವ ಗುರಿಯನ್ನು ಹೊಂದಿದ್ದು, ಪ್ಲಾಸ್ಟಿಕ್  ಬದಲಾಗಿ  ಬಯೋಡಿಗ್ರೇಡಬಲ್ (ನೈಸರ್ಗಿಕವಾಗಿ ಕೊಳೆಯುವ) ಪಾಟ್ಸ್ ಗಳ  ಬಳಕೆಗೆ ಪ್ರಾಮುಖ್ಯತೆಯನ್ನು ನೀಡುತ್ತದೆ. ಈ ಕಾರ್ಯಕ್ರಮವು ಪ್ರಾಯೋಗಿಕ ವಿಧಾನಗಳ ಮೂಲಕ ಮಕ್ಕಳನ್ನು ತೋಟಗಾರಿಕೆಯಲ್ಲಿ ತೊಡಗಿಸಿಕೊಂಡು ಆಹಾರ ಉತ್ಪಾದನೆಯ ಪರಿಸರ ಮತ್ತು ವೈಜ್ಞಾನಿಕ ಅಂಶಗಳ ಬಗ್ಗೆ ಜ್ಞಾನವನ್ನು ನೀಡುತ್ತದೆ.

## ಉದ್ದೇಶಗಳು:

- ಕೌಶಲ್ಯಾಭಿವೃದ್ಧಿ: ಮಕ್ಕಳಿಗೆ ಸುಸ್ಥಿರ ತೋಟಗಾರಿಕಾ ಅಭ್ಯಾಸಗಳ ಮೂಲಕೆ ಆಹಾರ ಬೆಳೆಯುವ ಪರಿಸರ-ಸ್ನೇಹಿ ಮಾರ್ಗಗಳ ಬಗ್ಗೆ ಕಲಿಸುವುದು.
- ಪರಿಸರ ಜಾಗೃತಿ: ಪರಿಸರಕ್ಕೆ ಉತ್ತಮವಾದ ನಮ್ಮ ಗ್ರೋಯಿಂಗ್ ಪಾಟ್ಸ್  ಗಳ ಪ್ರಾಮುಖ್ಯತೆಯನ್ನು ಮಕ್ಕಳಿಗೆ ಕಲಿಸುವುದು ಮತ್ತು  ಪ್ಲಾಸ್ಟಿಕ್ ಪಾಟ್ಸ್ ಹೇಗೆ ಮಾರಕವೆಂಬುದನ್ನು ವಿವರಿವರಿಸುವುದು.
- ಅನುಭವದ  ಕಲಿಕೆ: ಮಕ್ಕಳನ್ನು ತೋಟಗಾರಿಕೆಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡು, ಆಹಾರ ಉತ್ಪಾದನೆಯ ವೈಜ್ಞಾನಿಕ ಮತ್ತು ಪರಿಸರ ಆಯಾಮಗಳ ಬಗ್ಗೆ ಅವರ ತಿಳುವಳಿಕೆಯನ್ನು ಹೆಚ್ಚಿಸುವುದು.
- ಪೌಷ್ಟಿಕಾಂಶದ ತಿಳುವಳಿಕೆ: ಹಣ್ಣುಗಳು ಮತ್ತು ತರಕಾರಿಗಳ ಪೌಷ್ಟಿಕತೆಯ ಮಹತ್ವದ ಬಗ್ಗೆ ಮಕ್ಕಳಲ್ಲಿ ತಿಳುವಳಿಕೆಯನ್ನು ಹೆಚ್ಚಿಸುವ ಮೂಲಕ ಸಂಸ್ಕರಿಸಿದ ಆಹಾರಗಳ  ನಕರಾತ್ಮಕ ಪರಿಣಾಮಗಳ ಬಗ್ಗೆ ಅರಿವು ಮೂಡಿಸುವುದು.
- ಪರಿಸರ ಪರಿಣಾಮ: ನಾವು ಆಹಾರವನ್ನು ತಯಾರಿಸುವ ವಿಧಾನವು ಪರಿಸರದ ಮೇಲೆ ಹೇಗೆ ಪರಿಣಾಮ ಬೀರುತ್ತದೆ ಎಂಬುದನ್ನು ಮಕ್ಕಳಿಗೆ ಕಲಿಸುವುದು.



# Every Child a Pot can change a lot



## ಕಲಿಕೆಯ ಚಟುವಟಿಕೆಗಳು:

**ಕಾರ್ಯಕ್ರಮವು ಅದರ ಗುರಿಗಳನ್ನು ಅನುಸರಿಸುವ ಚಟುವಟಿಕೆಗಳನ್ನು ಒಳಗೊಂಡಿದೆ:**

- ಪ್ರಾಯೋಗಿಕ ತೋಟಗಾರಿಕೆ: ಸಸ್ಯಗಳ ಆರೈಕೆ ಮತ್ತು ಮಣ್ಣನ್ನು ತಿಳಿಯುವ ನೇರ ಅನುಭವಗಳು.
- ರುಚಿ ಪರಿಶೋಧನೆ: ವಿದ್ಯಾರ್ಥಿಗಳು ವಿವಿಧ ಆಹಾರ ಮತ್ತು ರುಚಿಗಳನ್ನು ಸವಿಯುತ್ತಾರೆ.
- ಶೈಕ್ಷಣಿಕ ಪ್ರಸ್ತುತಿಗಳು: ತೋಟಗಾರಿಕೆ ಮತ್ತು ಪೌಷ್ಟಿಕತೆಯ ಒಳನೋಟಗಳ ಹಂಚಿಕೆ.
- ಸಾಂಸ್ಕೃತಿಕ ಸಂಪರ್ಕಗಳು: ವಿವಿಧ ಸಂಸ್ಕೃತಿಗಳಲ್ಲಿ ತೋಟಗಾರಿಕೆಯ ಮಹತ್ವ ಅರಿಯುವುದು .
- ಸಂವಾದಾತ್ಮಕ ರಸಪ್ರಶ್ನೆಗಳು: ಕಲಿಕೆಯನ್ನು ಅಳೆಯಲು ಮತ್ತು ಬಲಗೊಳಿಸಲು ರಸಪ್ರಶ್ನೆಗಳು.

## ಕಲಿಕೆಯ ಫಲಿತಾಂಶಗಳು:

**ಕಾರ್ಯಕ್ರಮದ ಕೊನೆಯಲ್ಲಿ, ವಿದ್ಯಾರ್ಥಿಗಳು:**

ಪ್ರಮುಖ ತೋಟಗಾರಿಕೆ ವಿಧಾನಗಳು ಮತ್ತು ಸಸ್ಯ ಆರೈಕೆಯಲ್ಲಿ ಪ್ರಾವೀಣ್ಯತೆಯನ್ನು ಪ್ರದರ್ಶಿಸುತ್ತಾರೆ.

- ವಿವಿಧ ಆಹಾರಗಳ ಪೌಷ್ಟಿಕಾಂಶದ ಮೌಲ್ಯ ಮತ್ತು ವೈವಿಧ್ಯಮಯ ಆಹಾರ ಪದ್ಧತಿಯ ಪ್ರಯೋಜನಗಳನ್ನು ತಿಳಿದುಕೊಳ್ಳುತ್ತಾರೆ.
- ಸಸ್ಯಗಳ ಬೆಳವಣಿಗೆಯ ಹಂತಗಳನ್ನು ಗುರುತಿಸಿ ಸೂಕ್ತವಾದ ಆರೈಕೆ ಅಭ್ಯಾಸಗಳನ್ನು ಪ್ರಯೋಗಿಸುತ್ತಾರೆ.
- ಗೆಳೆಯರೊಂದಿಗೆ ಪರಿಣಾಮಕಾರಿಯಾಗಿ ಸಹಕರಿಸಿ ಒಳನೋಟಗಳನ್ನು ಹಂಚಿಕೊಳ್ಳುತ್ತಾರೆ.
- ತೋಟಗಾರಿಕೆ, ಪೋಷಣೆ ಮತ್ತು ಸುಸ್ಥಿರ ಜೀವನಗಳ ಪರಸ್ಪರ ಸಂಬಂಧವನ್ನು ಗುರುತಿಸುತ್ತಾರೆ.

ಈ ರಚನಾತ್ಮಕ ವಿಧಾನದ ಮೂಲಕ, ವಿದ್ಯಾರ್ಥಿಗಳು ಪ್ರಾಯೋಗಿಕ ಕೌಶಲ್ಯಗಳನ್ನು ಪಡೆದುಕೊಳ್ಳುತ್ತಾರೆ ಮತ್ತು ಪ್ರಕೃತಿ ಪೋಷಣೆ ಮತ್ತು ಅವರ ಆರೋಗ್ಯದ ನಡುವಿನ ಸಮಗ್ರ ಸಂಬಂಧವನ್ನು ಅರ್ಥ ಮಾಡಿಕೊಳ್ಳುತ್ತಾರೆ.

## ಶಾಲೆಗಳು ಭಾಗವಹಿಸಲು ಮಾನದಂಡಗಳು:

- 6-8ನೇ ತರಗತಿಯ ವಿದ್ಯಾರ್ಥಿಗಳ ದಾಖಲಾತಿ.
- ಪರಿಸರ ಶಿಕ್ಷಣದ ಬದ್ಧತೆ.
- ಸೂಕ್ತವಾದ ಜಾಗದ ಲಭ್ಯತೆ.
- ಶಾಲಾ ಆಡಳಿತದಿಂದ ಬೆಂಬಲ.
- ಪಠ್ಯಕ್ರಮದಲ್ಲಿ ತೋಟಗಾರಿಕೆಯ ಅಳವಡಿಕೆ.
- ಉದ್ಯಾನ-ಸಂಬಂಧಿತ ಚಟುವಟಿಕೆಗಳಿಗೆ ಸ್ವಯಂ ಪ್ರೇರಿತರಾಗಿ ತೊಡಗಿಸಿಕೊಳ್ಳುವಿಕೆ.

## V4S DIY ಟೂಲ್ ಕಿಟ್:

- ತರಕಾರಿ ಬೆಳವಣಿಗೆಯ ಕ್ಯಾಲೆಂಡರ್ ಸೇರಿದಂತೆ ಉಚಿತ ಡೌನ್‌ಲೋಡ್‌ಗೆ ಲಭ್ಯವಿರುವ "V4S ಕಲಿಕಾ ಸಾಮಗ್ರಿಗಳು
- ಜೈವಿಕ ವಿಘಟನೀಯ (ನೈಸರ್ಗಿಕವಾಗಿ ಕೊಳೆಯಬಲ್ಲ) ಗ್ರೋಯಿಂಗ್ ಪಾಟ್ಸ್
- ಸ್ಥಳೀಯ ಹವಾಮಾನಕ್ಕೆ ಸೂಕ್ತವಾದ ಬೀಜಗಳು
- ಸಾವಯವ ಗೊಬ್ಬರಗಳು
- ಅಗತ್ಯ ತೋಟಗಾರಿಕೆ ಉಪಕರಣಗಳು



*Let your school be the detective, diving deep into sustainable gardening's secrets.*